

# ನೀರಿನೊಳಗಿನ ಮಂಜು

■ ಡಾ. ನಾ. ಮೊಗಸಾಲೆ
ಕಲೆ: ಮನೋಹರ ಕೆ. ಆಚಾರ್ಯ

## ಕತೆಯಲ್ಲದ ಕತೆಯೊಳಗೆ ಸ್ವಬಿಂಬಗಳ ಮೆರವಣಿಗೆ

ಕುಪ್ಪಣ್ಣ ಭಟ್ಟ ಎಲ್ಲವನ್ನೂ ಕೇಳಿಸಿಕೊಂಡು, 'ಆ ಚಿಂತೆ ಬಿಡಿ ಜಯದೇವಪ್ಪನವರೇ, ನಾಡಿದ್ದು ನಮ್ಮ ಕೆರೆಮನೆ ಶಂಕರ ಭಟ್ಟರ ಮಗಳ ಮದುವೆಗೆ ನೀವು ಬನ್ನಿ. ಅಲ್ಲಿಗೆ ಇಂದ್ರಾಣಿ ಬಂದೇ ಬರುತ್ತಾಳೆ. ಅಲ್ಲಿ ಎಲ್ಲರ ಸಮಕ್ಷಮದಲ್ಲಿ ನಿಮ್ಮ ತೊಡೆಯ ಮೇಲೆ ಅವಳನ್ನು ನಾನು ಕೂರಿಸದಿದ್ದರೆ ಭಟ್ಟನೇ ಅಲ್ಲ' ಎಂದದ್ದಲ್ಲದೆ, 'ಅವಳ ಸಂಗಸುಖವೂ ನಿಮಗೆ ಸಿಗುವ ಹಾಗೆ ಮಾಡುವ ಜವಾಬ್ದಾರಿ ನನ್ನದು!' ಎಂದ. ಜಯದೇವಪ್ಪ ಸಂತೋಷದಲ್ಲಿ ಮರಳಿದ.

ಜಯದೇವಪ್ಪ ಖುಷಿಯಿಂದ ಈ ವಿಷಯವನ್ನು ಬೇಕಂತಲೇ ನಾಲ್ಕು ಜನರ ಕಿವಿಗೆ ಬೀಳುವ ಹಾಗೆ ಮಾಡಿದ. ಅದು ಡಂಗುರ ಹೊಡೆದಂತಾಯಿತು. 'ಖಂಡಿತವಾಗಿಯೂ ಶಂಕರ ಭಟ್ಟರ ಮದುವೆ ಮನೆಯಲ್ಲಿ ಇಂದ್ರಾಣಿ ತನ್ನ ತೊಡೆಯೇರುತ್ತಾಳೆ, ಬೇಕಾದರೆ ಬಂದು ನೋಡಿ' ಎನ್ನುತ್ತಾ ಆತ ಊರವರ ಕಿವಿನೆಟ್ಟಗಾಗುವಂತೆ ಮಾಡಿದ.

ಜಯದೇವಪ್ಪನ ಈ ಪ್ರಚಾರವು ನಿಧಾನವಾಗಿ ಇಂದ್ರಾಣಿಯ ಮನೆಯ ಮೆಟ್ಟಿಲನ್ನೂ ಹತ್ತಿತು. ಕುಪ್ಪಣ್ಣ ಭಟ್ಟನ ವಿಷಯ ಗೊತ್ತಿದ್ದ ಆಕೆಗೆ ತನ್ನ ಮೇಲೆ ಈ ಬಾರಿ ಖಂಡಿತವಾಗಿ ಆಕ್ರಮಣ ಆಗಿಯೇ ಆಗುತ್ತದೆ ಎನ್ನುವ ಭಯವಾಯಿತು. ತಾನು ದೇಹ ಮಾರುವವಳಾದರೂ ತನಗೆ ಇಷ್ಟವಿಲ್ಲದವರ ಜೊತೆ ಈ ತನಕ ಮಲಗಿದ್ದಿಲ್ಲ. ಅಂಥದ್ದರಲ್ಲಿ ತನ್ನನ್ನು ತನ್ನ ತೊಡೆಯಲ್ಲಿ ಕುಳ್ಳಿರಿಸಿಕೊಂಡ ಈ ಮನುಷ್ಯ ನಾಳೆ 'ತನ್ನ ಹಾಸಿಗೆಗೂ ಬಾ' ಎನ್ನದೆ ಇರುತ್ತಾನೆಯೇ ಎಂದು ಆಕೆ ಆತಂಕಗೊಂಡಳು. ಇದಕ್ಕೇನಾದರೂ ಪರಿಹಾರ ಇದ್ದರೆ ಗೋವಿಂದ ಭಟ್ಟರಲ್ಲಿ ಇರಬಹುದು ಎಂದುಕೊಂಡು ಅವಳು ಭಟ್ಟರ ಮನೆಯಾಚೆ ನಡೆದಳು.

ಗೋವಿಂದ ಭಟ್ಟರು ಇಂದ್ರಾಣಿಯ ಎಲ್ಲಾ ವಿಷಯಗಳನ್ನು ನಿಧಾನವಾಗಿ ಕೇಳಿಸಿಕೊಂಡರು. 'ತನಗೆ ಶಂಕರಭಟ್ಟರಿಂದ ಮದುವೆಗೆ ಈ ತನಕ ಆಹ್ವಾನ ಬಂದಿಲ್ಲ. ಬರಲೂಬಹುದು. ನಿನ್ನನ್ನು ಶಂಕರಭಟ್ರು ಮದುವೆಗೆ ಆಹ್ವಾನಿಸಿದ್ದಾರಾದರೆ, ನೀನು ಶಂಕರಭಟ್ಟರಲ್ಲಿ – 'ನಾನು ನಿಮ್ಮಲ್ಲಿಗೆ ಬರಬೇಕಾದರೆ ಗೋವಿಂದ ಭಟ್ಟರನ್ನು ಮದುವೆಗೆ ಆಹ್ವಾನಿಸಬೇಕು' ಎಂಬ ಶರ್ತ ಹಾಕು. ಮುಂದಿನದ್ದನ್ನು ನಾನು ನೋಡಿಕೊಳ್ಳುತ್ತೇನೆ' ಎಂದು ಇಂದ್ರಾಣಿಯನ್ನು ಸಂತೈಸಿದರು. ಇಂದ್ರಾಣಿ ಹಾಗೇ ನಡೆದುಕೊಂಡಳು.

ಶಂಕರಭಟ್ಟರ ಮಗಳ ಮದುವೆ ಗೋಧೂಳಿ ಲಗ್ನದಲ್ಲಿ ನಡೆಯುವುದಿತ್ತು. ಕುಪ್ಪಣ್ಣ ಭಟ್ಟನು ಸಂಜೆಯಾಗುವುದಕ್ಕೆ ನಾಲ್ಕು ಜಾವ ಮೊದಲೇ ಅಲ್ಲಿ ಪ್ರತ್ಯಕ್ಷನಾಗಿ 'ಅದು ಇದು' ಎಂದು ಸುಧಾರಿಕೆ ಮಾಡುತ್ತಿರುವಾಗ ಇಂದ್ರಾಣಿ ಬರುವುದು ಅವನಿಗೆ ಕಾಣಿಸಿತು. ಅವನು ನೇರವಾಗಿ ಅವಳಿದ್ದಲ್ಲಿಗೆ ನಡೆದು 'ಒಂದ್ನಿಮಿಷ ನನ್ನ ಜೊತೆ ಮಾತನಾಡಲು ಆ ಅಂಗಳದ ತುದಿತನಕ ಬಾ' ಎಂದು ಅವಳನ್ನು ಕರೆದ. ಇಂದ್ರಾಣಿ ಅತಂಕದಲ್ಲೇ ಅವನ ಬಳಿ ಸರಿದಳು. ಆತ 'ನೋಡು ಇಂದ್ರಾಣಿ, ನಾನು ಆ ಜಯದೇವಪ್ಪನಿಗೆ ಆಗಲೇ ಮಾತುಕೊಟ್ಟಾಗಿದೆ, ನೀನು 'ಇಲ್ಲ' ಅನ್ನಬಾರದು. ಇಂದು ಅವನ ತೊಡೆಯನ್ನು ನೀನು ಏರಲೇಬೇಕು' ಎಂದ.

ಇಂದ್ರಾಣಿ ಸಿಡಿಮಿಡಿಗೊಂಡಳು. 'ಸ್ವಾಮಿ ಭಟ್ಟರೇ, ನೀವು ಬೇರೆ ಏನು ಬೇಕಾದರೂ ಹೇಳಿ. ನಾನು ಶಿರಸಾವಹಿಸಿ ನಡೆದುಕೊಳ್ಳುತ್ತೇನೆ. ನೀವು ನಿಮ್ಮ ಜೊತೆ ಮಲಗು ಅಂದರೂ ಮಲಗುತ್ತೇನೆ. ಆದರೆ ಕರಡಿ ಮುಖದ ಜಯದೇವಪ್ಪನ ತೊಡೆಯನ್ನು ನಾನು ಸತ್ತರೂ ಏರುವವಳಲ್ಲ!' ಎಂದಳು ನಿಷ್ಠುರವಾಗಿ.

ಕುಪ್ಪಣ್ಣಭಟ್ಟ 'ಒಂದು ಸಾವಿರ ರೂಪಾಯಿ ಕೊಡಿಸುತ್ತೇನೆ ಇಂದ್ರಾಣಿ. ಇಲ್ಲ ಅನ್ನಬೇಡ. ಅಷ್ಟೇ ಅಲ್ಲ, ಒಂದು ಎಕರೆ ಗದ್ದೆ ಬೇಕಾದರೂ ಸಿಕ್ಕೀತು ನಿನಗೆ! ಅಂಗೈಯಗಲದ ನಿನ್ನ ಕುಂಡೆ ಆ ಜಯದೇವಪ್ಪನ ತೊಡೆ ಮೇಲೆ ಒಂದು ಕ್ಷಣ ಇದ್ದರೆ ನಿನಗೆ ಆಗುವ ನಷ್ಟ ಏನು?' ಎಂದು ಕುಪ್ಪಣ್ಣ ಭಟ್ಟನು ಇಂದ್ರಾಣಿಗೆ ಆಮಿಷ ಒಡ್ಡಿ ಬೆದರಿಕೆ ಹಾಕಿದ.

ಇಂದ್ರಾಣಿ, 'ನನಗೆ ಆ ದುಡ್ಡೂ ಬೇಡ. ಅವರ ಸ್ಪರ್ಶ ಸುಖವೂ ಬೇಡ. ನಾನು ಮೈಮಾರುವವಳಾಗಿರಬಹುದು ನಿಜ. ಆದರೂ ನಾನು ಮೈಮಾರಿದ ದುಡ್ಡಿನಿಂದ ಬೇಕಾದರೆ ನಿಮಗೇ ನೂರು ರೂಪಾಯಿ ಕೊಡುತ್ತೇನೆ. ಇಂತಹ ಬೇಡಿಕೆಗಳನ್ನು ದಯವಿಟ್ಟು ನನ್ನ ಮುಂದೆ ಇಡಬೇಡಿ' ಎಂದು ಕುಪ್ಪಣ್ಣ ಭಟ್ಟರಿಗೆ ಕೈ ಮುಗಿದು ಕಣ್ಣು ತುಂಬಿಕೊಂಡಳು.

ಕುಪ್ಪಣ್ಣ ಭಟ್ಟ ಕೆಂಡಾಮಂಡಲವಾದ. 'ನೋಡು